# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1264 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 13.03.2026. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | "ಪ್ರಾಯೋಜಕತ್ವ" ಯೋಜನೆಯಡಿ ಪಾಲನೆ-ಪೋಷಣೆ ಕಾಣುತ್ತಿರುವ ರಾಜ್ಯದ ಸುಮಾರು 26,334 ಮಕ್ಕಳಿಗೆ ಕಳೆದ 07 ತಿಂಗಳಿನಿಂದ ಮಾಸಾಶನ ಬಾರದೆ ಇರುವುದರಿಂದ, ದಿಕ್ಕಿಲ್ಲದ ಮಕ್ಕಳ ಅನ್ನ-ಆಸರೆ ಇಲ್ಲದೆ ಅತ್ಯಂತ ಸಂಕಷ್ಟಕ್ಕೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ.<br>"ಪ್ರಾಯೋಜಕತ್ವ" ಯೋಜನೆಯು ಕೇಂದ್ರ ಪುರಸ್ಕೃತ ಕಾರ್ಯಕ್ರಮವಾಗಿದ್ದು, ಕೇಂದ್ರ ಸರ್ಕಾರದಿಂದ ಶೇಕಡ 60% ಹಾಗೂ ರಾಜ್ಯ ಸರ್ಕಾರದಿಂದ ಶೇಕಡ 40% ಅನುಪಾತದಲ್ಲಿ ವಿಸ್ತ್ರತ ಕುಟುಂಬಗಳ ಆರೈಕೆಯಲ್ಲಿರುವ ಅನಾಥ ಮತ್ತು ದುರ್ಬಲ ಕುಟುಂಬಗಳ ಏಕಪೋಷಕ ಮಕ್ಕಳಿಗೆ ತಮ್ಮ ಕುಟುಂಬದಲ್ಲಿಯೇ ಉಳಿದು ಬೆಳೆಯಲು ಆರ್ಥಿಕ ಬೆಂಬಲವನ್ನು ನೀಡಲು ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ. 2024-25 ನೇ ಸಾಲಿನ ಪುರ್ನವಿನಿಯೋಗಿಸಲಾದ ಅನುದಾನದಿಂದ 2025-26 ನೇ ಸಾಲಿನ ಪ್ರಥಮ ತ್ರೈಮಾಸಿಕ ಅನುದಾನವನ್ನು DBT ಮೂಲಕ ಫಲಾನುಭವಿಗಳಿಗೆ ಆರ್ಥಿಕ ಬೆಂಬಲವನ್ನು ನೀಡಲಾಗಿರುತ್ತದೆ. 2025-26ನೇ ಸಾಲಿಗೆ ರಾಜ್ಯದಿಂದ 50000 ಫಲಾನುಭವಿಗಳಿಗೆ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಆದರೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ 18,673 ಫಲಾನುಭವಿಗಳಿಗೆ ಮಾತ್ರ ಅನುಮೋದನೆ ನೀಡಿ ಪ್ರಥಮ ಕಂತಿನ ಅನುದಾನವನ್ನು ದಿನಾಂಕ:30.12.2025 ರಂದು SNA Sparsh model ನಲ್ಲಿ ಬಿಡುಗಡೆಗೊಳಿಸಿರುತ್ತಾರೆ. ಈ ಹಿಂದೆ ಈ ಯೋಜನೆಯನ್ನು SNA model ನಲ್ಲಿ ಅನುಷ್ಠಾನಗೊಳಿಸಲಾಗುತ್ತಿತ್ತು. ಪ್ರಸ್ತುತ SNA Sparsh model ನಲ್ಲಿ On board ಮಾಡುವ ತಾಂತ್ರಿಕ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ರಾಜ್ಯ ಸರ್ಕಾರದ ವತಿಯಿಂದ ಶೇಕಡ 40% ಅನುದಾನದೊಂದಿಗೆ ಫಲಾನುಭವಿಗಳಿಗೆ ಶೀಘ್ರವೇ DBT ಮಾಡಲು ಕ್ರಮವಹಿಸಲಾಗುವುದು. |

| | | |
|---|---|---|
| ಆ) | ಬಂದಿದ್ದಲ್ಲಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ "ಪ್ರಾಯೋಜಕತ್ವ" ಯೋಜನೆಯಡಿ ನೋಂದಣಿಯಾಗಿರುವ ಫಲಾನುಭವಿಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು) | 2025-26ನೇ ಸಾಲಿನ ಪ್ರಥಮ ತ್ರೈಮಾಸಿಕ ಅಂತ್ಯಕ್ಕೆ 19998 ಫಲಾನುಭವಿಗಳು ನೋಂದಣಿಯಾಗಿದ್ದು, ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ. ಡಿಸೆಂಬರ್2025ರ ಅಂತ್ಯಕ್ಕೆ ಯೋಜನೆಗೆ ಒಟ್ಟು 27159 ಫಲಾನುಭವಿಗಳು ನೋಂದಣಿಯಾಗಿರುತ್ತಾರೆ. ಆದರೆ ಕೇಂದ್ರ ಸರ್ಕಾರವು 18673 ಫಲಾನುಭವಿಗಳಿಗೆ ಮಾತ್ರ ಅನುಮೋದನೆ ನೀಡಿ ಅನುದಾನ ಬಿಡುಗಡೆಗೊಳಿಸಿರುತ್ತದೆ. ಸದರಿ ಅನುದಾನವನ್ನು ಬಳಕೆ ಮಾಡಿದ ಕೂಡಲೇ ಹೆಚ್ಚುವರಿ 8486 ಫಲಾನುಭವಿಗಳಿಗೆ ಅನುದಾನ ಬಿಡುಗಡೆಗೊಳಿಸಲು ಕೇಂದ್ರ ಸರ್ಕಾರವನ್ನು ಮತ್ತೊಮ್ಮೆ ಕೋರಲಾಗುವುದು. ಜಿಲ್ಲಾವಾರು ಬಿಡುಗಡೆಗೊಳಿಸಲಾದ ಮತ್ತು ನೋಂದಣಿಯಾಗಿರುವ ಫಲಾನುಭವಿಗಳ ಜಿಲ್ಲಾವಾರು ಸಂಖ್ಯಾ ಮಾಹಿತಿಯನ್ನು **ಅನುಬಂಧ-1 & 2**ರಲ್ಲಿ ಒದಗಿಸಲಾಗಿದೆ. |
| ಇ) | ನೋಂದಣಿಯಾಗಿರುವ ಪ್ರತೀ ಫಲಾನುಭವಿಗೆ ನೀಡುತ್ತಿರುವ ಮಾಸಾಶನ ಎಷ್ಟು: ಫಲಾನುಭವಿಗಳಿಗೆ ಇದುವರೆಗೆ ಯಾವ ತಿಂಗಳಿನವರೆಗೆ ಮಾಸಾಶನವನ್ನು ನೀಡಲಾಗಿದೆ: | 2025-26ನೇ ಸಾಲಿನ ಪ್ರಥಮ ತ್ರೈಮಾಸಿಕ ಅಂತ್ಯಕ್ಕೆ 19998 ಫಲಾನುಭವಿಗಳು ನೋಂದಣಿಯಾಗಿ DBT ಮೂಲಕ ಮಾಹೆಯಾನ ರೂ.4000/-ದಂತೆ ಜೂನ್ 2025 ವರೆಗೆ ಫಲಾನುಭವಿಗಳ ಖಾತೆಗೆ ನೇರವಾಗಿ ಬಿಡುಗಡೆಗೊಳಿಸಲಾಗುತ್ತದೆ. |
| ಈ) | ಪ್ರಸ್ತುತ ಮಾಸಾಶನ ನೀಡಲು ಬಾಕಿ ಉಳಿದಿರುವ ಫಲಾನುಭವಿಗಳ ಸಂಖ್ಯೆ ಎಷ್ಟು: ವಿತರಣೆ ಮಾಡಲು ಬಾಕಿ ಉಳಿದಿರುವ ಮಾಸಾಶನದ ಒಟ್ಟು ಮೊತ್ತವೆಷ್ಟು: (ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು) | ನೋಂದಣಿಯಾಗಿರುವ 27159 ಫಲಾನುಭವಿಗಳಿಗೆ ಜುಲೈ 2025 ಮಾಹೆಯಿಂದ ಆರ್ಥಿಕ ಬೆಂಬಲ ನೀಡುವುದು ಬಾಕಿಯಿರುತ್ತದೆ. ಜಿಲ್ಲಾವಾರು ಮಾಹಿತಿ **ಅನುಬಂಧ-03**ರಲ್ಲಿ ನೀಡಲಾಗಿದೆ. |
| ಉ) | ಕುಷ್ಠ ಪೀಡಿತ ಮಕ್ಕಳು, ಅನಾಥರು, ಜೈಲು, ಶಿಕ್ಷೆಗೆ ಗುರಿಯಾದವರ ಕಂದಮ್ಮಗಳ, ಕೋವಿಡ್ ನಿಂದ ತಂದೆ ಅಥವಾ ತಾಯಿ ಕಳೆದುಕೊಂಡು ಏಕಪಾಲಕರಾದ ಮಕ್ಕಳ ಶಿಕ್ಷಣ, ಪೌಷ್ಠಿಕ ಆಹಾರ, ಟ್ಯೂಷನ್ ಭತ್ಯೆ, ಮತ್ತಿತರ ಖರ್ಚಿಗೆ ಈ ಮಾಸಾಶನವನ್ನೆ ನಂಬಿದ್ದು, ಆ ಮಕ್ಕಳಿಗೆ ಮಾಸಾಶನ ನೀಡದೆ ಇರುವ ಕಾರಣಗಳೇನು: | ಜೂನ್ ಅಂತ್ಯದವರೆಗೆ ಈಗಾಗಲೇ ಆರ್ಥಿಕ ಬೆಂಬಲ ನೀಡಲಾಗಿದ್ದು, SNA model ನಿಂದ SNA Sparsh model ಗೆ ತಂತ್ರಾಂಶ ಬದಲಾವಣೆ ಆಗಬೇಕಾಗಿರುವುದರಿಂದ ಅನುದಾನ ಬಿಡುಗಡೆ ವಿಳಂಬವಾಗಿರುತ್ತದೆ. ಆರ್ಥಿಕ ವರ್ಷದ ಅಂತ್ಯದೊಳಗೆ ಎಲ್ಲಾ ಬಾಕಿ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು. |

| | | |
|---|---|---|
| ಊ) | "ಪ್ರಾಯೋಜಕತ್ವ" ಯೋಜನೆಯಡಿ ನೋಂದಣಿಯಾಗಿರುವ ಎಲ್ಲಾ ಫಲಾನುಭವಿಗಳಿಗೆ ಯಾವ ಕಾಲಮಿತಿಯೊಳಗೆ ಬಾಕಿಯಿರುವ ಸಂಪೂರ್ಣ ಮಾಸಾಶನ ಮೊತ್ತವನ್ನು ಪಾವತಿ ಮಾಡಲಾಗುವುದು? | ಕೇಂದ್ರ ಸರ್ಕಾರವು ಅನುಮೋದನೆ ನೀಡಿರುವ 18673 ಫಲಾನುಭವಿಗಳಿಗೆ 2025-26ನೇ ಸಾಲಿನ ಅಂತ್ಯದೊಳಗೆ ಅನುದಾನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುವುದು. ಹೆಚ್ಚುವರಿ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ ಅನುಮೋದನೆ ಮತ್ತು ಅನುದಾನ ಬಿಡುಗಡೆಯಾದ ಕೂಡಲೇ ಪಾವತಿಸಲು ಕ್ರಮವಹಿಸುವುದು. |

ಮಮಇ 60 ಮಭಾಬ 2026

(ಲಕ್ಷ್ಮೀ ಆರ್. ಹೆಬ್ಬಾಳ್ಕರ್)
ಮಹಿಳಾ ಮತ್ತುಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರೀಕರ
ಸಬಲೀಕರಣ ಸಚಿವರು.

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1264 ಕ್ಕೆ ಅನುಬಂಧ-1

| ಕ್ರ.ಸಂ | ಜಿಲ್ಲೆಯ ಹೆಸರು | 2025-26 ನೇ ಸಾಲಿಗೆ ನೋಂದಣಿಯಾಗಿರುವ ಫಲಾನುಭವಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 591 |
| 2 | ಬೆಂಗಳೂರು(ಗ್ರಾ) | 625 |
| | ಬೆಂಗಳೂರು ನಗರ(ಕೇಂದ್ರ) | 140 |
| | ಬೆಂಗಳೂರು ನಗರ(ಉತ್ತರ) | 190 |
| | ಬೆಂಗಳೂರು ನಗರ(ದಕ್ಷಿಣ) | 273 |
| | ಬೆಂಗಳೂರು ನಗರ(ಪೂರ್ವ) | 68 |
| 3 | ಬೆಂಗಳೂರು ನಗರ(ಪಶ್ಚಿಮ) | 204 |
| 4 | ಬೆಳಗಾವಿ | 908 |
| 5 | ಬಳ್ಳಾರಿ | 1044 |
| 6 | ಬೀದರ್ | 559 |
| 7 | ವಿಜಯಪುರ | 477 |
| 8 | ಚಾಮರಾಜನಗರ | 113 |
| 9 | ಚಿಕ್ಕಬಳ್ಳಾಪುರ | 1010 |
| 10 | ಚಿಕ್ಕಮಗಳೂರು | 213 |
| 11 | ಚಿತ್ರದುರ್ಗ | 1583 |
| 12 | ದಕ್ಷಿಣಕನ್ನಡ | 813 |
| 13 | ದಾವಣಗೆರೆ | 480 |
| 14 | ಧಾರವಾಡ | 2894 |
| 15 | ಗದಗ | 1125 |
| 16 | ಕಲ್ಬುರ್ಗಿ | 380 |
| 17 | ಹಾಸನ | 202 |
| 18 | ಹಾವೇರಿ | 1762 |
| 19 | ಕೊಡಗು | 697 |
| 20 | ಕೋಲಾರ | 836 |
| 21 | ಕೊಪ್ಪಳ | 1955 |
| 22 | ಮಂಡ್ಯ | 479 |
| 23 | ಮೈಸೂರು | 1334 |
| 24 | ರಾಯಚೂರು | 1306 |
| 25 | ರಾಮನಗರ | 595 |
| 26 | ಶಿವಮೊಗ್ಗ | 603 |
| 27 | ತುಮಕೂರು | 686 |
| 28 | ಉಡುಪಿ | 302 |
| 29 | ಉತ್ತರ ಕನ್ನಡ | 608 |
| 30 | ಯಾದಗಿರಿ | 1419 |
| 31 | ವಿಜಯನಗರ | 685 |
| | **ಒಟ್ಟು** | **27159** |

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1264 ಕ್ಕೆ ಅನುಬಂಧ-2**

| ಕ್ರ.ಸಂ | ಜಿಲ್ಲೆಯ ಹೆಸರು | ಈಗಾಗಲೇ 1 ನೇ ಕಂತಿನ ಅನುದಾನ ಬಿಡುಗಡೆ ಮಾಡಲಾದ ಫಲಾನುಭವಿಗಳ ಸಂಖ್ಯೆ |
|---|---|---|
| 1 | ಬಾಗಲಕೋಟೆ | 178 |
| 2 | ಬೆಂಗಳೂರು(ಗ್ರಾ) | 1003 |
| | ಬೆಂಗಳೂರು ನಗರ(ಕೇಂದ್ರ) | 96 |
| | ಬೆಂಗಳೂರು ನಗರ(ಉತ್ತರ) | 110 |
| | ಬೆಂಗಳೂರು ನಗರ(ದಕ್ಷಿಣ) | 239 |
| | ಬೆಂಗಳೂರು ನಗರ(ಪೂರ್ವ) | 60 |
| 3 | ಬೆಂಗಳೂರು ನಗರ(ಪಶ್ಚಿಮ) | 150 |
| 4 | ಬೆಳಗಾವಿ | 941 |
| 5 | ಬಳ್ಳಾರಿ | 1094 |
| 6 | ಬೀದರ್ | 588 |
| 7 | ವಿಜಯಪುರ | 351 |
| 8 | ಚಾಮರಾಜನಗರ | 100 |
| 9 | ಚಿಕ್ಕಬಳ್ಳಾಪುರ | 295 |
| 10 | ಚಿಕ್ಕಮಗಳೂರು | 156 |
| 11 | ಚಿತ್ರದುರ್ಗ | 875 |
| 12 | ದಕ್ಷಿಣಕನ್ನಡ | 1035 |
| 13 | ದಾವಣಗೆರೆ | 514 |
| 14 | ಧಾರವಾಡ | 931 |
| 15 | ಗದಗ | 950 |
| 16 | ಕಲ್ಬುರ್ಗಿ | 366 |
| 17 | ಹಾಸನ | 179 |
| 18 | ಹಾವೇರಿ | 455 |
| 19 | ಕೊಡಗು | 627 |
| 20 | ಕೋಲಾರ | 853 |
| 21 | ಕೊಪ್ಪಳ | 1517 |
| 22 | ಮಂಡ್ಯ | 514 |
| 23 | ಮೈಸೂರು | 981 |
| 24 | ರಾಯಚೂರು | 953 |
| 25 | ರಾಮನಗರ | 183 |
| 26 | ಶಿವಮೊಗ್ಗ | 343 |
| 27 | ತುಮಕೂರು | 350 |
| 28 | ಉಡುಪಿ | 392 |
| 29 | ಉತ್ತರ ಕನ್ನಡ | 788 |
| 30 | ಯಾದಗಿರಿ | 1284 |
| 31 | ವಿಜಯನಗರ | 547 |
| **ಒಟ್ಟು** | | **19998** |

## ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1264 ಕ್ಕೆ ಅನುಬಂಧ-3

| ಕ್ರ.ಸಂ | ಜಿಲ್ಲೆಯ ಹೆಸರು | ಅನುದಾನ ಬಿಡುಗಡೆ ಮಾಡಬೇಕಾಗಿರುವ ಫಲಾನುಭವಿಗಳ ಸಂಖ್ಯೆ | ಅನುದಾನ ಬಿಡುಗಡೆ ಮಾಡಬೇಕಾಗಿರುವ ಮೊತ್ತ |
|---|---|---|---|
| 1 | ಬಾಗಲಕೋಟೆ | 591 | 14976000 |
| 2 | ಬೆಂಗಳೂರು(ಗ್ರಾ) | 625 | 20000000 |
| | ಬೆಂಗಳೂರು ನಗರ(ಕೇಂದ್ರ) | 140 | 3604000 |
| | ಬೆಂಗಳೂರು ನಗರ(ಉತ್ತರ) | 190 | 5008000 |
| | ಬೆಂಗಳೂರು ನಗರ(ದಕ್ಷಿಣ) | 273 | 9744000 |
| | ಬೆಂಗಳೂರು ನಗರ(ಪೂರ್ವ) | 68 | 2156000 |
| 3 | ಬೆಂಗಳೂರು ನಗರ(ಪಶ್ಚಿಮ) | 204 | 6648000 |
| 4 | ಬೆಳಗಾವಿ | 908 | 29372000 |
| 5 | ಬಳ್ಳಾರಿ | 1044 | 29700000 |
| 6 | ಬೀದರ್ | 559 | 18264000 |
| 7 | ವಿಜಯಪುರ | 477 | 22204000 |
| 8 | ಚಾಮರಾಜನಗರ | 113 | 3744000 |
| 9 | ಚಿಕ್ಕಬಳ್ಳಾಪುರ | 1010 | 28296000 |
| 10 | ಚಿಕ್ಕಮಗಳೂರು | 213 | 7008000 |
| 11 | ಚಿತ್ರದುರ್ಗ | 1583 | 47448000 |
| 12 | ದಕ್ಷಿಣಕನ್ನಡ | 813 | 33936000 |
| 13 | ದಾವಣಗೆರೆ | 480 | 17772000 |
| 14 | ಧಾರವಾಡ | 2894 | 86040000 |
| 15 | ಗದಗ | 1125 | 38100000 |
| 16 | ಕಲ್ಬುರ್ಗಿ | 380 | 13824000 |
| 17 | ಹಾಸನ | 202 | 6336000 |
| 18 | ಹಾವೇರಿ | 1762 | 50032000 |
| 19 | ಕೊಡಗು | 697 | 21752000 |
| 20 | ಕೋಲಾರ | 836 | 26972000 |
| 21 | ಕೊಪ್ಪಳ | 1955 | 58700000 |
| 22 | ಮಂಡ್ಯ | 479 | 15608000 |
| 23 | ಮೈಸೂರು | 1334 | 42096000 |

| | | | |
|---|---|---|---|
| 24 | ರಾಯಚೂರು | 1306 | 38376000 |
| 25 | ರಾಮನಗರ | 595 | 19224000 |
| 26 | ಶಿವಮೊಗ್ಗ | 603 | 15900000 |
| 27 | ತುಮಕೂರು | 686 | 21952000 |
| 28 | ಉಡುಪಿ | 302 | 7004000 |
| 29 | ಉತ್ತರ ಕನ್ನಡ | 608 | 25044000 |
| 30 | ಯಾದಗಿರಿ | 1419 | 49728000 |
| 31 | ವಿಜಯನಗರ | 685 | 24876000 |
| **ಒಟ್ಟು** | | **27159** | **861444000** |